**ಸಾಕ್ಷಿಯನ್ನು ದಿಃ 07.11.2024 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನಾನು 10 ನೇ ತರಗತಿವರೆಗೆ ಓದಿರುತ್ತೇನೆ. ಈ ದಾವೆಯ ಬಗ್ಗೆ ತಿಳಿದುಕೊಂಡಿರುತ್ತೇನೆ. ನನ್ನ ತಾತನ ಹೆಸರು ಯಾಲಕ್ಕಯ್ಯ ಎಂದರೆ ಸರಿ. ಸಿದ್ದಮ್ಮ ನನ್ನ ಅಜ್ಜಿ. ಸದರಿ ಸಿದ್ದಮ್ಮ ರವರಿಗೆ 1 ನೇ ಪ್ರತಿವಾದಿ ಚಲುವಯ್ಯ, 2 ನೇ ಪ್ರತಿವಾದಿಯ ಗಂಡ ಮತ್ತು 3 ರಿಂದ 6 ನೇ ಪ್ರತಿವಾದಿಯವರ ತಂದೆ ಚಿಕ್ಕ ಚಲುವಯ್ಯ, ಮೃತ 7 ನೇ ಪ್ರತಿವಾದಿ ಹಾಗೂ ವಾದಿ ಕೆಂಪಮ್ಮ ಇವರೆಲ್ಲರೂ ಯಾಲಕ್ಕಯ್ಯ ಮತ್ತು ಸಿದ್ದಮ್ಮ ರವರ ಮಕ್ಕಳು ಎಂದರೆ ಸರಿ. ಮುಂದುವರೆದು ಸಾಕ್ಷಿಯು ವಾದಿ ಕೆಂಪಮ್ಮ ಯಾಲಕ್ಕಯ್ಯ ಮತ್ತು ಸಿದ್ದಮ್ಮ ನ ಮಗಳು ಎಂದು ಈ ದಾವೆ ಹೂಡಿದ ನಂತರ ಗೊತ್ತಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಸರ್ವೇ ನಂ. 80 ರಲ್ಲಿ 2 ಎಕರೆ 7 ಗುಂಟೆ ಜಮೀನು ಮೂಲತಃ ಚಕ್ರಕೊಡುಗೆ ಜಮೀನಾಗಿರುತ್ತದೆ. ಯಾಲಕ್ಕಯ್ಯ ನವರ ಕುಟುಂಬ ಮೂಲತಃ ಚಕ್ರಗಾರಿಕೆ ಮಾಡುವ ಕುಟುಂಬ ಎಂದರೆ ಸಾಕ್ಷಿಯು ನನ್ನ ತಾತ ತೀರಿಹೋದ ನಂತರ ನನ್ನ ದೊಡ್ಡಪ್ಪ ಚಕ್ರಗಾರಿಕೆ ಶುರುಮಾಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸರ್ವೇ ನಂ. 80 ರ ಮೂಲ ದಾಖಲೆ ನನ್ನ ದೊಡ್ಡಪ್ಪ ಚಲುವಯ್ಯ ನವರ ಹೆಸರಿನಲ್ಲಿದೆ. ಸದರಿ ಚಲುವಯ್ಯ ಮೃತಪಟ್ಟಿರುತ್ತಾರೆ. ಸರ್ವೇ ನಂ. 78 ರಲ್ಲಿ 1 ಎಕರೆ 38 ಗುಂಟೆ ಜಮೀನಿನ ಮೂಲತಃ ಚಕ್ರಕೊಡುಗೆ ಜಮೀನಾಗಿರುತ್ತದೆ. ಸರ್ವೇ ನಂ. 217 ರಲ್ಲಿ ಒಂದೂವರೆ ಗುಂಟೆ ಜಮೀನು ಮೂಲತಃ ಚಕ್ರಕೊಡುಗೆ ಜಮೀನಾಗಿರುತ್ತದೆ. ಸದರಿ ಆಸ್ತಿಯನ್ನು ಚಲುವಯ್ಯ, ಚಿಕ್ಕ ಚಲುವಯ್ಯ ಮತ್ತು ಸ್ವಾಮಿ ಇವರ ನಡುವೆ ನೊಂದಾಯಿತ ವಿಭಾಗ ಪತ್ರ 1995-96 ರಲ್ಲಿ ಆಗಿರುತ್ತದೆ. ನನ್ನ ತಕರಾರಿನಲ್ಲಿ ಸದರಿ ವಿಭಾಗ ಪತ್ರದ ಬಗ್ಗೆ ಬರೆಯಿಸಿರುತ್ತೇನೆ. ಸದರಿ ವಿಭಾಗ ಪತ್ರವನ್ನು ಹಾಜರು ಪಡಿಸಿರುತ್ತೇನೆ. ದಾವ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಯಾಗಿದ್ದು ಒಟ್ಟು ಕುಟುಂಬದ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ಸದರಿ ಪಾಲು ಪಾರಿಕತ್ ನಲ್ಲಿ ವಾದಿ ಕೆಂಪಮ್ಮ ರವರನ್ನು ಸೇರಿಸಿರುವುದಿಲ್ಲ. ಸದರಿ ಕೆಂಪಮ್ಮ ರವರಿಗೆ ಭಾಗ ಕೊಟ್ಟಿರುವುದಿಲ್ಲ. ಮುಂದುವರೆದು ನನ್ನ ದೊಡ್ಡಪ್ಪ ರವರು ತಮಗೆ ಬಂದ ಭಾಗವನ್ನು ಮಾರಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಆ ರೀತಿ ಮಾರಾಟ ಮಾಡುವಾಗ ವಾದಿಯ ಒಪ್ಪಿಗೆ ಪಡೆದುಕೊಂಡಿರುತ್ತೀರಾ ಎಂದರೆ ಆ ಬಗ್ಗೆ ಅವರಿಗೆ ಕೇಳಬೇಕು ಎಂದು ಉತ್ತರಿಸಿರುತ್ತಾರೆ. ನಾನು ಹೇಳಿದ ಹಾಗೆ ನನ್ನ ತಂದೆಯ ಸಹೋದರರ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಭಾಗ ಕೊಡಬೇಕಾಗುತ್ತದೆ

ಎಂದು ವಿಭಾಗ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರ್.ಟಿ.ಸಿ. ಯಲ್ಲಿ ಯಾವ ಆಧಾರದ ಮೇಲೆ ಖಾತೆ ಮಾಡಿಸಿಕೊಂಡಿದ್ದೀರಿ ಎಂದರೆ ಸಾಕ್ಷಿಯು ನನ್ನ ತಂದೆ ತೀರಿಹೋದ ನಂತರ ನಾವು ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ನಿಡಿ. 1 ರಲ್ಲಿ ಸರ್ವೇ ನಂ. 78/1 ರಲ್ಲಿ 15 ಗುಂಟೆ ಜಮೀನು, ಸರ್ವೇ ನಂ. 78/2 ರಲ್ಲಿ 29 ಗುಂಟೆ, ಸರ್ವೇ ನಂ. 78/3 ರಲ್ಲಿ 29 ಗುಂಟೆ ಜಮೀನು, ಸರ್ವೇ ನಂ. 78/4 ರಲ್ಲಿ 5 ಗುಂಟೆ ಜಮೀನುಗಳು ಅಸ್ತಿತ್ವದಲ್ಲಿದೆ.

ನಾವು ಹರಿಜನಕೋಮಿಗೆ ಸೇರಿದವರು ಎಂದರೆ ಸರಿ. ಕೊಡುಗೆಯಿಂದ ಬಂದ ಜಮೀನನ್ನು ಮಾರಾಟ ಮಾಡಲು ಸರ್ಕಾರದಿಂದ ಅನುಮತಿ ಪಡೆಯಬೇಕು ಎಂದರೆ ಸರಿ. ನಿಪಿ. 7 ರಲ್ಲಿ ನಡೆದ ಕ್ರಯದ ವ್ಯವಹಾರದ ಬಗ್ಗೆ ವಾದಿಯವರಿಗೆ ಹೇಳಿರುವುದಿಲ್ಲ ಎಂದರೆ ಅದಕ್ಕೂ ನನಗೂ ಸಂಬಂಧ ಇಲ್ಲ ಎಂದು ಉತ್ತರಿಸಿರುತ್ತಾರೆ. ಜಮೀನು ಮಾರಾಟ ಮಾಡುವ ಮೊದಲು ಸರ್ಕಾರದಿಂದ ಅನುಮತಿ ಪಡೆದುಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಿಪಿ. 5 ರಿಂದ 7 ಕ್ರಯಪತ್ರಗಳು ವಾದಿಗೆ ಬದ್ಧವಾಗುವುದಿಲ್ಲ ಎಂದರೆ ಸರಿಯಲ್ಲ. ಯಾಲಕಯ್ಯನ ತಂದೆಯ ಸಿಂಗ್ರಯ್ಯ ಎಂದರೆ ಸರಿ. ಸಿಂಗ್ರಯ್ಯನ ತಂದೆಯ ಹೆಸರು ಯಾಲಕ್ಕಯ್ಯ ಎಂದರೆ ನನಗೆ ಗೊತ್ತಿಲ್ಲ. ದಾವ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ಗೊತ್ತಿದ್ದು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅತ್ತೆ ವಾದಿ ಕೆಂಪಮ್ಮ ರವರಿಗೆ ವಿಭಾಗ ಕೊಡುವುದನ್ನು ತಪ್ಪಿಸಲು ಪಿತ್ರಾರ್ಜಿತ ಆಸ್ತಿಗಳು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.